ಸಿಸಿ ನಂಃ **2082/2023**
ಪಿ <u>ಡಬ್ಲ್ಯೂಃ **1**</u>

ದಿನಾಂಕಃ 21-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎಸ್.ಕೆ ವಕೀಲರಿಂದಃ</u>

9. ನಾನು ಜನರಲ್ ಸ್ಟೋರ್ ಹೊಂದಿರುತ್ತೇನೆ. ಸದರಿ ಅಂಗಡಿಯಿಂದ ನಿಮಗೆ ತಿಂಗಳಿಗೆ ಕೇವಲ 10-15 ಸಾವಿರ ಆದಾಯ ಇದ್ದರೂ ಸಹ ಸುಮಾರು 50 ಸಾವಿರ ಆದಾಯ ಇರುತ್ತದೆ ಎಂದು ಸುಳ್ಳು ಸಾಕ್ಷ ನುಡಿದಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಸದರಿ ಅಂಗಡಿ, ಬಾಡಿಗೆ ಹಾಗೂ ನನ್ನ ನೌಕರಿಯಿಂದ ತಿಂಗಳಿಗೆ ರೂ.30-40 ಸಾವಿರ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. 2022-23 ರಲ್ಲಿ ನೀವು ಉಪನ್ಯಾಸಕ ವೃತ್ತಿ ಮಾಡುತ್ತಿರಲಿಲ್ಲ ಹಾಗಾಗಿ ಅದರಿಂದ ನಿಮಗೆ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ಸರಿ, ಆದರೆ ನಾನು ಖಾಸಗಿ ಟುಷೇನ್ ನಡೆಸುತ್ತಿದ್ದೆನು ಎಂದು ನುಡಿಯುತಾರೆ. ನಾನು ಟುಷ್ಷೇನ್ ನಡೆಸುತ್ತಿದ್ದೆನು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಎಲ್ಲ ಮೂಲಗಳಿಂದ ಮಾಸಿಕ ರೂ.15-20 ಸಾವಿರ ಮಾತ್ರ ಆದಾಯ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಎಲ್ಲಾ ಆದಾಯ ನನ್ನ ಕುಟುಂಬ ನಿರ್ವಹಣೆಗೆ ಖರ್ಚಾಗುತ್ತದೆ, ಯಾವುದೇ ಉಳಿತಾಯ ಆಗುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ರೂ.50 ಸಾವಿರದಿಂದ ರೂ.1 ಲಕ್ಷ ಮೊತ್ತದಂತ ಸಾಲ ನೀಡುವ ಆರ್ಥಿಕ ಸಾಮರ್ಥ್ಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

10. ನಾನು ಸಂಘ ಸಂಸ್ಥೆಗಳಿಂದ ಸಾಲ ಪಡೆದು ಆರೋಪಿಗೆ ಸಾಲ ನೀಡಿದ್ದೆನು ಎಂದು ದೂರಿನಲ್ಲಿ ನಮೂದು ಮಾಡಿಲ್ಲ. ನಾನು ಆ ರೀತಿ ಸಾಲ ಪಡೆದು ಆರೋಪಿಗೆ ಹಣವನ್ನು ಸಾಲವಾಗಿ ನಿಡಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚೆಕ್ ಅಮಾನ್ಯಗೊಂಡ ನಂತರ ನಾನು ಆರೋಪಿಗೆ ಕರೆ ಮಾಡಿದ್ದೆನು ಹಾಗೂ ಆತ ಸಹ ನನಗೆ ಕರೆ ಮಾಡಿ ದೂರು ದಾಖಲು ಮಾಡದಂತೆ ಕೇಳಿಕೊಂಡಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಹೊಸ ಮನೆ ಕಟ್ಟಲು ನನ್ನ ಹತ್ತಿರ ಸಾಲ ಪಡೆದುಕೊಂಡಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ತಂದೆ ಮನೆ ಕಟಟಲು ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದರು ಹಾಗೂ ಅವರ ಜಮೀನು ಸಿಮೆಂಟ್ ಪ್ಯಾಕ್ಟರಿ ನಿರ್ಮಾಣಕ್ಕೆ ಭೂ ಸ್ವಾದೀನವಾಗಿದ್ದರಿಂದ ಅದರಿಂದ ಸಾಕಷ್ಟು ಹಣ ಬಂದಿತ್ತು ಹಾಗಾಗಿ ನಿಮ್ಮಿಂದ ಸಾಲ ಪಡೆದುಕೊಳ್ಳುವ ಅವಶ್ಯಕತೆ ಅವರಿಗೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ ನನ್ನಿಂದ ಸಾಲ ಪಡೆದುಕೊಂಡಿರುವುದು ನಿಜ ಎಂದು ನುಡಿಯುತ್ತಾರೆ. ನಾನು

ಕಳುಹಿಸಿದ ಕಾನೂನು ತಿಳುವಳಿಕೆ ನೋಟಿಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-5ರ ಅಂಚೆ ಸ್ವೀಕೃತಿಯನ್ನು ತೋರಿಸಿ ಅದರಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸಾಕ್ಷಿಯು ದಾಖಲೆ ನೋಡಿ ಸಹಿ ಇದೆ ಆದರೆ ಅದು ಆರೋಪಿಯ ಸಹಿ ಆಗಿರುತ್ತದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂಚೆ ಸ್ವೀಕೃತಿಯಲ್ಲಿ ಇರುವ ಸಹಿ ಆರೋಪಿಯ ಸಹಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2023 ರಲ್ಲಿ ಆರೋಪಿ ನನ್ನಿಂದ ರೂ.9 ಲಕ್ಷ ಸಾಲ ಪಡೆದುಕೊಂಡಿಲ್ಲ ಹಾಗೂ ಅದಕ್ಕೆ ಸಂಬಂಧಿಸಿದಂತೆ ನನಗೆ ನಿಪಿ-1 ರ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಎ ರಲ್ಲಿನ ಸಹಿಯನ್ನು ಆರೋಪಿ 2023 ರಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದು 2017-18ರ ಪೂರ್ವದಲ್ಲಿನ ಸಹಿ ಆಗಿರುತ್ತದೆ ಎಂದರೆ ಸರಿಯಲ್ಲ. ವಿನಾಯಕ ಸಹಕಾರಿ ಸಂಘದ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ಆರೊಪಿಯ ನಡುವೆ ಮನಸ್ತಾಪ ಉಂಟಾಗಿದ್ದರಿಂದ ನಾನು ನಿಪಿ-1ರ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಮರುಪಾವತಿ ಮಾಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ